**All India Radio, Dharwad**
**Pradesha Samachara(Kannada)**
**16.05.2012 – 0705 hours**

- ಸುದ್ದಿವಾಹಿನಿಗಳಲ್ಲಿ ಪ್ರಸಾರವಾಗುವ ಅಶ್ಲೀಲ ದೃಶ್ಯಗಳನ್ನು ಹಾಗೂ ಜಾಹೀರಾತುಗಳ ನಿಷೇಧಕ್ಕೆ ಕಠಿಣ ಕ್ರಮ – ಕೇಂದ್ರ ವಾರ್ತಾ ಸಚಿವೆ ಅಂಬಿಕಾ ಸೋನಿ.
- ಸದ್ಯಕ್ಕೆ ಶಾಸಕಾಂಗ ಪಕ್ಷದ ಸಭೆ ಕರೆಯುವ ಅವಶ್ಯಕತೆ ಇಲ್ಲ – ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ.
- 2 ಸಾವಿರದ 800 ಕೋಟಿ ರೂಪಾಯಿ ವೆಚ್ಚದಲ್ಲಿ, 7 ಸಾವಿರದ 400 ಕಿಲೋಮೀಟರ್ ಉದ್ದದ ರಸ್ತೆ ಕಾಮಗಾರಿ ಪ್ರಾರಂಭ – ಲೋಕೋಪಯೋಗಿ ಸಚಿವ ಸಿ.ಎಂ. ಉದಾಸಿ.
- ಸಮತೋಲನದೊಂದಿಗೆ ಗೊಬ್ಬರವನ್ನು ಬಳಸುವುದರ ಮೂಲಕ, ಭೂಸಾರ ಸಂರಕ್ಷಣೆ ಸಾಧ್ಯ – ಕೇಂದ್ರ ಕೃಷಿ ಸಚಿವ ಶರತ್ ಪವಾರ್.

ಎಲ್ಲಾ ಸುದ್ದಿವಾಹಿನಿಗಳಿಗೆ ಅಶ್ಲೀಲ ದೃಶ್ಯ ಹಾಗೂ ಜಾಹೀರಾತುಗಳನ್ನು ಪ್ರಸಾರ ಮಾಡದಂತೆ ಮಾರ್ಗದರ್ಶಕ ಸೂತ್ರಗಳನ್ನು ಪಾಲಿಸುವಂತೆ ಸೂಚಿಸಲಾಗಿದೆ ಎಂದು ಕೇಂದ್ರ ವಾರ್ತಾ ಸಚಿವೆ ಅಂಬಿಕಾ ಸೋನಿ ಹೇಳಿದ್ದಾರೆ. ನಿನ್ನೆ ಸಂಸತ್ತಿನಲ್ಲಿ, ಮಹಿಳೆಯರ ಅಶ್ಲೀಲ ಜಾಹೀರಾತುಗಳನ್ನು ಬಿತ್ತರಿಸುವ ಬಗ್ಗೆ ಸಂಸದರ ಪ್ರಶ್ನೆಗಳಿಗೆ ಉತ್ತರಿಸಿದ ಅವರು ಅಶ್ಲೀಲ ಜಾಹೀರಾತು ಪ್ರಕರಣಗಳಲ್ಲಿ ಕೆಲವು ಕೋರ್ಟ್ ಮೆಟ್ಟಿಲೇರಿವೆ; ಕೇಂದ್ರ ಸಮಾಚಾರ ಪ್ರಸಾರ ಇಲಾಖೆಯ ನಿರ್ದೇಶನಗಳನ್ನು ಉಲ್ಲಂಘಿಸುವ ಸುದ್ದಿ ವಾಹಿನಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು. ಬಹಳಷ್ಟು ಸುದ್ದಿವಾಹಿನಿಗಳು ಇಲಾಖೆಯ ನಿರ್ದೇಶನಗಳನ್ನು ಪಾಲಿಸುತ್ತಿವೆ; ಈ ಪ್ರಕರಣದ ಸಂಬಂಧ ಅಂತರ್ ಸಚಿವ ಸಮಿತಿಯನ್ನು ರಚಿಸಲಾಗಿದೆ ಎಂದರು.

<><><>

ಸದ್ಯಕ್ಕೆ ಶಾಸಕಾಂಗ ಪಕ್ಷದ ಸಭೆ ಕರೆಯುವ ಅವಶ್ಯಕತೆ ಇಲ್ಲ ಎಂದು ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಹೇಳಿದ್ದಾರೆ. ನಿನ್ನೆ ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಶಾಸಕಾಂಗ ಪಕ್ಷದ ಸಭೆ ಕರೆಯುವ ಸಂದರ್ಭ ಬಂದರೆ, ವರಿಷ್ಠ ನಾಯಕರೊಂದಿಗೆ ಚರ್ಚಿಸಲಾಗುವುದು ಎಂದರು. ಬರಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾಮಗಾರಿ ಕೈಗೊಳ್ಳಲು ಸರ್ಕಾರ ಕಟಿಬದ್ಧವಾಗಿದೆ; ಕೇಂದ್ರದ ಶಿಕ್ಷಣ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗುವುದು ಎಂದರು.

<><><>

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಅಡಿಯಲ್ಲಿ, ಲೋಕೋಪಯೋಗಿ ಇಲಾಖೆಯು, 2,800 ಕೋಟಿ ರೂಪಾಯಿ ವೆಚ್ಚದಲ್ಲಿ 7,400 ಕಿಲೋಮೀಟರ್ ಉದ್ದದ ರಸ್ತೆ ಕಾಮಗಾರಿ ಕೈಗೊಳ್ಳಲಿದೆ ಎಂದು ಲೋಕೋಪಯೋಗಿ ಸಚಿವ ಸಿ.ಎಂ. ಉದಾಸಿ ಹೇಳಿದ್ದಾರೆ. ನಿನ್ನೆ ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಮೊದಲನೇ ಹಂತದಲ್ಲಿ 3,700 ಕಿಲೋಮೀಟರ ರಸ್ತೆ ಕಾಮಗಾರಿಗೆ 1,420 ಕೋಟಿ ರೂಪಾಯಿ ವ್ಯಯಿಸಲು ಸಂಪುಟ ಅನುಮೋದನೆ ನೀಡಿದೆ ಎಂದರು. ಶೀಘ್ರದಲ್ಲೇ ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಲಿದೆ; ಈ ಕಾಮಗಾರಿ 2013 ಮಾರ್ಚ್‌ವರೆಗೆ ಪೂರ್ಣಗೊಳ್ಳಲಿದೆ; 9 ರಾಜ್ಯ ಹೆದ್ದಾರಿಗಳಲ್ಲಿ ದಾರಿ ಸುಂಕ ವಸೂಲಾತಿ ಆರಂಭಿಸಲು ಸಚಿವ ಸಂಪುಟ ಅನುಮೋದನೆ ನೀಡಲಿದೆ ಎಂದು ಸಚಿವ ಉದಾಸಿ ಹೇಳಿದರು.

<><><>

ಸಮತೋಲನದೊಂದಿಗೆ ಗೊಬ್ಬರವನ್ನು ಬಳಸುವುದರ ಮೂಲಕ, ಭೂಸಾರ ಸಂರಕ್ಷಣೆ ಮಾಡಬಹುದು ಎಂದು ಕೇಂದ್ರ ಕೃಷಿ ಸಚಿವ ಶರತ್ ಪವಾರ್ ಹೇಳಿದ್ದಾರೆ. ನಿನ್ನೆ ಲೋಕಸಭೆಯಲ್ಲಿ ಪ್ರಶ್ನೆಗೆ ಉತ್ತರ ನೀಡಿದ ಅವರು, ಭೂಸಾರ ಪರೀಕ್ಷೆಗಾಗಿ, ಸಂಚಾರಿ ಪ್ರಯೋಗಾಲಯಗಳನ್ನು ತೆರೆಯುವ ಮೂಲಕ, ಗೊಬ್ಬರಗಳ ಗುಣಮಟ್ಟವನ್ನು

ಸಂರಕ್ಷಿಸಲಾಗುವುದು ಎಂದರು. ನೈಸರ್ಗಿಕ ಹಾಗೂ ಸಾವಯವ ಗೊಬ್ಬರವನ್ನು ಬಳಸಲು ರೈತರು ಮುಂದಾಗಬೇಕು; ಸಾವಯವ ಕೃಷಿಗೆ ಆದ್ಯತೆ ನೀಡಿದರೆ ಭೂಸಾರ ರಕ್ಷಣೆ ಸಾಧ್ಯವಾಗುತ್ತದೆ ಎಂದರು. ಭೂಮಿಯ ಫಲವತ್ತತೆ ಹಾಗೂ ಅಧಿಕ ಇಳುವರಿಯ ಗುರಿಯನ್ನಿಟ್ಟುಕೊಂಡು ಕೇಂದ್ರ ಸರ್ಕಾರ ಭೂಪರೀಕ್ಷೆ ಆಧಾರಿತ ಸಮತೋಲನಾತ್ಮಕ ಗೊಬ್ಬರ ಬಳಕೆಯ ರಾಷ್ಟ್ರೀಯ ಯೋಜನೆಯನ್ನು 2008-09 ರಿಂದಲೇ  ಅನುಷ್ಠಾನಗೊಳಿಸುತ್ತಲಿದೆ ಎಂದು ಕೇಂದ್ರ ಕೃಷಿ ಸಚಿವ ಶರತ್ ಪವಾರ್ ಹೇಳಿದ್ದಾರೆ.

<><><>

ಸೊಳ್ಳೆಗಳಿಂದ ಉಂಟಾಗುವ ಮಲೇರಿಯಾ, ಡೆಂಗ್ಯು, ಚಿಕುನ್‌ಗುನ್ಯಾ, ಮಿದುಳು ಜ್ವರ ಮುಂತಾದ ವ್ಯಾಧಿಗಳ ಬಗ್ಗೆ ಎಚ್ಚರಿಕೆಯ ಕ್ರಮ ಕೈಗೊಳ್ಳುವಂತೆ ಎಲ್ಲಾ ರಾಜ್ಯಗಳಿಗೆ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಸಲಹೆ ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಗುಲಾಂ ನಬೀ ಆಜಾದ್ ಹೇಳಿದ್ದಾರೆ. ನಿನ್ನೆ ರಾಜ್ಯಸಭೆಯಲ್ಲಿ ಈ ಮಾಹಿತಿಯನ್ನು ಲಿಖಿತ ರೂಪದಲ್ಲಿ ನೀಡಿದ ಅವರು ಮುಂದಿನ ಮುಂಗಾರು ಬರುವ ಮುನ್ನವೇ, ಈ ವ್ಯಾಧಿಗಳು ಬಾರದಂತೆ ತಡೆಗಟ್ಟಲು ಈ ಸೂಚನೆ ನೀಡಲಾಗಿದೆ ಎಂದರು. ರೋಗ ನಿಯಂತ್ರಣ ಯೋಜನೆ ಅನುಷ್ಠಾನ ನಕ್ಷೆ ಅಡಿಯಲ್ಲಿ,ಈಗಾಗಲೇ ಎಲ್ಲಾ ರಾಜ್ಯಗಳು ಪ್ರದೇಶವಾರು ನಕ್ಷೆಗಳನ್ನು ತಯಾರು ಮಾಡಿದ್ದಾರೆ ಎಂದರು.

<><><>

ವ್ಯಕ್ತಿಗಿಂತ ಪಕ್ಷ ಮುಖ್ಯ ಎಂದು ಪೇಜಾವರ ಮಠಾಧೀಶ  ವಿಶ್ವೇಶತೀರ್ಥ ಸ್ವಾಮೀಜಿ ಹೇಳಿದ್ದಾರೆ. ನಿನ್ನೆ ಬಳ್ಳಾರಿಯಲ್ಲಿ ಸುದ್ದಿಗಾರರೊಂದಿಗೆ  ಮಾತನಾಡಿದ ಅವರು, ಅಸ್ತಿತ್ವದ ಉಳಿವಿಗಾಗಿ ಯಡಿಯೂರಪ್ಪ ಗೊಂದಲ ಉಂಟು ಮಾಡುತ್ತಿರುವುದು ಬೇಸರ ತಂದಿದೆ ಎಂದರು. ಪಕ್ಷದ ಸಮಸ್ಯೆಗಳ ಕುರಿತು ಬಹಿರಂಗ ಚರ್ಚೆ ನಡೆಸದೆ ತಮ್ಮ ಇತಿಮಿತಿಯೊಳಗೆ ಬಗೆಹರಿಸಿಕೊಳ್ಳಬೇಕು;  ರಾಜಕಾರಣಿಗಳು ಪಾರದರ್ಶಕತೆ ಕಾಯ್ದುಕೊಳ್ಳಬೇಕು; ಅನುಮಾನಗಳಿಗೆ ಆಸ್ಪದ ನೀಡದಂತೆ ವ್ಯವಹರಿಸುವ ಅಗತ್ಯ ಇದೆ ಎಂದರು. ಜನರ ಅಭ್ಯುದಯದ ಕಡೆ ಎಲ್ಲ ಪಕ್ಷಗಳ ಮುಖಂಡರೂ ಆದ್ಯತೆ  ನೀಡಬೇಕು; ಬರಪೀಡಿತ ಪಾವಗಡ ತಾಲೂಕಿನ ಜಾನುವಾರುಗಳಿಗೆ ಪೇಜಾವರ ಮಠದಿಂದ ಮೇವು ಸರಬರಾಜು ಮಾಡಲಾಗುತ್ತಿದೆ ಎಂದು ಸ್ವಾಮಿಜಿ ಹೇಳಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ.

<><><>

ಮಾಜಿ ಕೇಂದ್ರ ಸಚಿವ ಎ. ರಾಜಾರಿಗೆ ನಿನ್ನೆ ದೆಹಲಿಯ ನ್ಯಾಯಾಲಯ, 2ಜಿ ಸ್ಪೆಕ್ಟ್ರಂ ಪ್ರಕರಣದಲ್ಲಿ ಷರತ್ತುಬದ್ಧ ಜಾಮೀನು ನೀಡಿದೆ. ಕಳೆದ 15 ತಿಂಗಳಿಂದ ಜೈಲುವಾಸ ಅನುಭವಿಸಿದ ರಾಜಾ ಇವರಿಗೆ, ಸಿಬಿಐ ನ್ಯಾಯಾಧೀಶ ಓ.ಪಿ. ಸೈನಿ, 20 ಲಕ್ಷ ರೂಪಾಯಿ ವೈಯಕ್ತಿಕ ಬಾಂಡ್ ಹಾಗೂ ಅಷ್ಟೇ ಮೊತ್ತದ ಎರಡು ಭದ್ರತೆ ಪಡೆದ ನಂತರ, ಜಾಮೀನು ನೀಡಿದರು. ನ್ಯಾಯಾಲಯದ ಅನುಮತಿ ಇಲ್ಲದೆ ಡಿಎಂಕೆ ಸಂಸದ ರಾಜಾ, ತಮಿಳುನಾಡಿಗೆ ಹೋಗಬಾರದು;  ದೂರ ಸಂಚಾರ ಇಲಾಖೆಗೆ ಭೇಟಿ ನೀಡಬಾರದು;  ಸಾಕ್ಷಿಗಳ ಮೇಲೆ ಪ್ರಭಾವ ಬೀರಬಾರದು ಎಂಬ ಷರತ್ತುಗಳೊಂದಿಗೆ,  ಈ ಜಾಮೀನು ನೀಡಲಾಗಿದೆ.

<><><>

ಚಿತ್ರದುರ್ಗ ಜಿಲ್ಲೆಯಲ್ಲಿ ಭೀಕರ ಬರಗಾಲ ಸಂಭವಿಸಿದ್ದು, ತೀವ್ರ ಪ್ರಮಾಣದ ನಷ್ಟವಾಗಿದೆ; ಈ ಎಲ್ಲ ಅಂಶಗಳನ್ನು ಆಧಾರವಾಗಿಟ್ಟುಕೊಂಡು, ಕೇಂದ್ರ ಸರ್ಕಾರಕ್ಕೆ ವರದಿ ನೀಡಿ, ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ಅನುಷ್ಠಾನಗೊಳಿಸುವಂತೆ ಸಲಹೆ ನೀಡಲಾಗುವುದು ಎಂದು ಕೇಂದ್ರ ಬರ ಅಧ್ಯಯನ ತಂಡದ ಸದಸ್ಯ ಡಿ. ರಾಜಶೇಖರನ್ ಹೇಳಿದ್ದಾರೆ. ಅವರು ಚಿತ್ರದುರ್ಗ ಜಿಲ್ಲೆಯ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ, ಬರ ಪರಿಸ್ಥಿತಿ ಕುರಿತು ಪರಿಶೀಲಿಸಿದ, ನಂತರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ್ದಾರೆ. ಜಿಲ್ಲೆಯಲ್ಲಿ ಬರ ಸಂಭವಿಸಿರುವ ಹಿನ್ನೆಲೆಯಲ್ಲಿ, ಅಂತರ್ ಜಲಮಟ್ಟ ಕುಸಿದಿದ್ದು, ಕೊಳವೆಬಾವಿಗಳು ಬತ್ತಿಹೋಗಿವೆ; ಜಾನುವಾರುಗಳಿಗೆ ಮೇವು, ನೀರು ದೊರೆಯದ ಕಾರಣ ರೈತರು, ತಮ್ಮ ದನಕರುಗಳನ್ನು ಗೋಶಾಲೆಗಳಲ್ಲಿ ತಂದು ಪೋಷಿಸುತ್ತಿದ್ದಾರೆ; ಗ್ರಾಮೀಣ ಭಾಗಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಉಂಟಾಗಿದೆ ಎಂದರು.

<><><>

ರಾಜ್ಯದಲ್ಲಿ ಅಂಗನವಾಡಿ ಕೇಂದ್ರದಲ್ಲಿ, ಮಕ್ಕಳಿಗೆ ಅಪೌಷ್ಠಿಕತೆಯ ಸಮಸ್ಯೆಗೆ ಸರ್ಕಾರದ ವಿವಿಧ ಇಲಾಖೆಗಳ ನಡುವಣ ಸಮನ್ವಯದ ಅಭಾವವೇ ಕಾರಣ ಎಂದು ನ್ಯಾಯಮೂರ್ತಿ ಎನ್.ಕೆ.ಪಾಟೀಲ ಅಭಿಪ್ರಾಯಪಟ್ಟಿದ್ದಾರೆ. ಅವರು ನಿನ್ನೆ ರಾಯಚೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಅಪೌಷ್ಠಿಕತೆಯ ಶಾಶ್ವತ ನಿವಾರಣೆಗೆ, ಆರೋಗ್ಯ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಇಲಾಖೆ, ಕೃಷಿ, ಆಹಾರ ಮತ್ತು ನಾಗರಿಕ ಸರಬರಾಜು, ತೋಟಗಾರಿಕೆ, ಗ್ರಾಮೀಣಾಭಿವೃದ್ಧಿ ಹಾಗೂ ನಗರಾಭಿವೃದ್ಧಿ ಇಲಾಖೆಗಳು ಜಂಟಿಯಾಗಿ ಕ್ರಮ ಕೈಗೊಳ್ಳಬೇಕಾಗಿದೆ ಎಂದರು. ರಾಯಚೂರು ಜಿಲ್ಲೆಯಲ್ಲಿ ಅಪೌಷ್ಠಿಕತೆಯಿಂದ ಮಗು ಮೃತಪಟ್ಟಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಾಧೀಶರು, ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು, 9 ಜನ ಸದಸ್ಯರ ತಂಡ ರಚಿಸಿದ್ದು, ತಾವು ಈಗಾಗಲೇ ಕಂದಾಯ ಇಲಾಖೆಗಳ 4 ವಿಭಾಗಗಳ ಜಿಲ್ಲಾಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಸಲಾಗಿದೆ ಎಂದರು.

<><><>

ನಾಳೆ ಎಸ್.ಎಸ್.ಎಲ್.ಸಿ.ಫಲಿತಾಂಶ ಮಧ್ಯಾಹ್ನ 2 ಗಂಟೆಗೆ ಲಭ್ಯವಾಗಲಿದೆ ಎಂದು
ಪ್ರೌಢ ಶಿಕ್ಷಣ  ಮಂಡಳಿ ನಿರ್ದೇಶಕ ಡಿ.ವೆಂಕಟೇಶ್ವರ ಹೇಳಿದ್ದಾರೆ.

<><><>

ಗಾಂಧೀಜಿಯವರ ಆದರ್ಶಗಳನ್ನು ಯುವ ಜನತೆ ಮೈಗೂಡಿಸಿಕೊಳ್ಳಬೇಕು ಎಂದು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಹೇಳಿದ್ದಾರೆ. ದೊಡ್ಡಬಳ್ಳಾಪುರ ತಾಲೂಕಿನ ಅಗಸಾನ ರೆಸಾರ್ಟ್‌ನಲ್ಲಿ ಭಾರತ ಸೇವಾದಳ ಮತ್ತು ಹಿರಿಯ ಸ್ವಾತಂತ್ರ್ಯ ಹೋರಾಟಗಾರರ ವೇದಿಕೆಯ ಸಂಯುಕ್ತ ಆಶ್ರಯದಲ್ಲಿ  ನಡೆದ ರಾಷ್ಟ್ರೀಯ ಯುವ ಚಿಂತನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಇದೇ ಸಂದರ್ಭದಲ್ಲಿ ಮಾತನಾಡಿದ ಮಾಜಿ ಕೇಂದ್ರ ಸಚಿವ ಸಿ.ಕೆ.ಜಾಫರ್‌ಷರೀಫ್ ದೇಶದಲ್ಲಿ ಭ್ರಷ್ಟಚಾರವನ್ನು ತೊಲಗಿಸದೆ, ಸಮಾಜದ ಪರಿವರ್ತನೆ ಸಾಧ್ಯವಿಲ್ಲ; ಭ್ರಷ್ಟಚಾರವನ್ನು ತೊಲಗಿಸಲು ಯುವಶಕ್ತಿಯನ್ನು ಸಮರ್ಥವಾಗಿ ಬಳಸಿಕೊಳ್ಳಬೇಕಾಗಿದೆ; ಪ್ರತಿ ಗ್ರಾಮ ಮಟ್ಟದಿಂದ ರಾಷ್ಟ್ರೀಯ ಅರಿವು ಮೂಡಿಸುವ  ಯುವ ಚಿಂತನ ಶಿಬಿರಗಳು ನಡೆಯಬೇಕಾಗಿದೆ ಎಂದರು.

<><><>

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಖಾಸಗಿ ಶಿಕ್ಷಣ ಸಂಸ್ಥೆಗಳೊಂದಿಗೆ ಯಾವುದೇ ಕಾನೂನು ಬಾಹಿರ ಚಟುವಟಿಕೆಗಳೊಂದಿಗೆ ಭಾಗೀಯಾಗಿಲ್ಲ ಎಂದು ಕುಲಪತಿ ಕೆ.ಎಸ್. ರಂಗಪ್ಪ ಹೇಳಿದ್ದಾರೆ. ನಿನ್ನೆ ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವೈದ್ಯಕೀಯ ಶಿಕ್ಷಣ ಸಚಿವ ಎಸ್.ಎ. ರಾಮದಾಸ್, ವಿಶ್ವವಿದ್ಯಾಲಯದ ಕುರಿತು ಮಾಡಿದ ಆರೋಪಕ್ಕೆ ಯಾವುದೇ ಆಧಾರಗಳಿಲ್ಲ;  ಈ ರೀತಿ ಆಧಾರ ರಹಿತ ಆರೋಪ ಮಾಡುವುದರಿಂದ, ಮುಕ್ತ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿರುವ 3 ಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿಗಳ ಮೇಲೆ ದುಷ್ಪರಿಣಾಮ ಬೀರಲಿದೆ ಎಂದರು.

<><><>

ಮಹಿಳೆಯರಿಗೆ ಶೇಕಡ 33 ರಷ್ಟು ಮೀಸಲಾತಿ ನೀಡಲು ಕೇಂದ್ರ ಸರ್ಕಾರ ಕಟಿಬದ್ಧವಾಗಿದೆ ಎಂದು ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅನಿತಾ ವರ್ಮ ಹೇಳಿದ್ದಾರೆ. ನಿನ್ನೆ ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬರಪರಿಸ್ಥಿತಿ ಅಧ್ಯಯನಕ್ಕಾಗಿ, ಕೇಂದ್ರ ಸರ್ಕಾರ ಎರಡನೇ ತಂಡವನ್ನು ರಾಜ್ಯಕ್ಕೆ ಕಳುಹಿಸಿದೆ;  ಕಾಂಗ್ರೆಸ್ಸೇತರ ರಾಜ್ಯಗಳ ವಿಷಯದಲ್ಲಿ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿಲ್ಲ ಎಂದರು.

<><><>

ಈಗ ಹವಾಮಾನ ವರದಿ

ರಾಜ್ಯದ ಕೆಲವು ಪ್ರದೇಶಗಳಲ್ಲಿ ಸಾಧಾರಣೆ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಹಾನಗಲ್ ಹಾಗೂ ಮಳವಳ್ಳಿಗಳಲ್ಲಿ ತಲಾ 6 ಸೆಂಟಿಮೀಟರ, ಹಾವೇರಿಯಲ್ಲಿ 5, ಕುಶಾಲನಗರ, ಹೊಳೆನರಸೀಪುರ ಹಾಗೂ ಚನ್ನಪಟ್ಟಣಗಳಲ್ಲಿ ತಲಾ 4,  ಆಲೂರು, ಹಳ್ಳಿಮೈಸೂರುಗಳಲ್ಲಿ ತಲಾ 3, ಸೋಮವಾರಪೇಟೆ, ಹೆಚ್.ಡಿ.ಕೋಟೆ, ಕುಣಿಗಲ್‌ಗಳಲ್ಲಿ ತಲಾ 2 ಸೆಂಟಿಮೀಟರ ಮಳೆ ಆಗಿದೆ. ಕರಾವಳಿ ಹಾಗೂ ಉತ್ತರ ಒಳನಾಡಿನ ಪ್ರದೇಶಗಳಲ್ಲಿ ತಾಪಮಾನದಲ್ಲಿ ಸ್ವಲ್ಪ ಮಟ್ಟಿಗೆ ಏರಿಕೆಯಾಗಿದೆ. ಗುಲ್ಬರ್ಗಾದಲ್ಲಿ ಗರಿಷ್ಠ ತಾಪಮಾನ 40.8 ಡಿಗ್ರಿ ಸೆಲ್ಸಿಯಸ್

ದಾಖಲಾಗಿದೆ. ಮುಂದಿನ 48 ಗಂಟೆಗಳಲ್ಲಿ ಕರಾವಳಿ, ಉತ್ತರ ಹಾಗೂ ದಕ್ಷಿಣ ಒಳನಾಡಿನ ಹಲವೆಡೆ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ವರದಿ ತಿಳಿಸಿದೆ.

<><><>